OS No. 55/2017

PW-1 ಕ್ಯಾಸಯ್ಯ

Date: 27.02.2025

**<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು 23 ರಿಂದ 26 ನೇ ಪ್ರತಿವಾದಿಗಳ ಪರ ಶ್ರೀ ಟಿಟಿಎಸ್ ವಕೀಲರಿಂದಃ</u>**

ನಾನು ಯಾವುದೇ ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು 19 ರಿಂದ 22 ನೇ ಪ್ರತಿವಾದಿರವರೊಂದಿಗೆ ಅನೋನ್ಯವಾಗಿ ಇದ್ದೇನೆ ಎಂದರೆ ಸರಿ. ನಾನು 1 ರಿಂದ 14 ನೇ ಪ್ರತಿವಾದಿರವರೊಂದಿಗೆ ಕೂಡ ಅನೋನ್ಯವಾಗಿ ಇದ್ದೇನೆ ಎಂದರೆ ಸರಿ. ನನ್ನ ಸ್ವಂತ ಊರು ಬುಡ್ನಹಟ್ಟಿ ಎಂದರೆ ಸರಿ. ಮೇಲೆ ಹೇಳಿದ ಪ್ರತಿವಾದಿಗಳು ಕೂಡ ಬುಡ್ನಹಟ್ಟಿಯ ವಾಸಿಗಳು ಎಂದರೆ ಸರಿ. 15 ರಿಂದ 18 ನೇ ಪ್ರತಿವಾದಿಗಳು ಕೂಡ ಬುಡ್ನಹಟ್ಟಿಯ ವಾಸಿಗಳು ಎಂದರೆ ಸರಿ. ಸಣ್ಣ ಬೋರಯ್ಯ ರವರು ಅವರ ತಂದೆಯಾದ ಚನ್ನಯ್ಯ ರವರಿಗೆ ಒಬ್ಬನೆ ಮಗ ಎಂದರೆ ಸರಿ. ಸಣ್ಣಬೋರಯ್ಯ ರವರಿಗೆ ಬುಡ್ನಹಟ್ಟಿ ಗ್ರಾಮದ ಸನಂ.56/2 ರಲ್ಲಿ 30 ಎಕರೆ 19 ಗುಂಟೆ ಜಮೀನು ಇತ್ತು ಎಂದರೆ ಸರಿ. ಸದರಿ ಜಮೀನಿನ ಸ್ವಾದೀನ ಮತ್ತು ಮಾಲೀಕತ್ವ ಸಣ್ಣಬೋರಯ್ಯ ರವರು ಹೊಂದಿದ್ದರು **ಎಂದರೆ ಸರಿ**.

ನಾನು ಬಂಗಾರಜ್ಜ ರವರನ್ನು ನೋಡಿರುವುದಿಲ್ಲ. ನಾನು ಸಲ್ಲಿಸಿದ ವಂಶವೃಕ್ಷದ ಪ್ರಕಾರ ಬಂಗಾರಜ್ಜ ರವರಿಗೆ ಬಂಗಾರಜ್ಜಿ ಹಾಗೂ ಬೋರಜ್ಜಿ ಎನ್ನುವ ಇಬ್ಬರು ಹೆಂಡತಿಯರು ಇದ್ದರು ಎಂದು ತೋರಿಸಲು ನನ್ನ ಬಳಿ ದಾಖಲಾತಿಗಳು ಇವೆ. ಯಾವ ದಾಖಲಾತಿ ಎಂದು ಕೇಳಿದ ಪ್ರಶ್ನೆಗೆ ವಂಶವೃಕ್ಷ ಎಂದು ನುಡಿದಿರುತ್ತಾರೆ. ನಾನು ಬಂಗಾರಜ್ಜ ರವರ ಇಬ್ಬರು ಹೆಂಡತಿಯರನ್ನು ನೋಡಿರುವುದಿಲ್ಲ. ಬೋರಜ್ಜಿ ರವರಿಗೆ ಇಬ್ಬರು ಮಕ್ಕಳು ಇದ್ದರು ಅವರ ಹೆಸರು ಚನ್ನಯ್ಯ ಮತ್ತು ಬೋರಯ್ಯ. ಬಂಗಾರಜ್ಜಿ ರವರಿಗೆ 6 ಜನ ಮಕ್ಕಳು. ಅವರ ಹೆಸರು ಬೋರಯ್ಯ, ಚನ್ನಯ್ಯ, ಬಂಗಾರಯ್ಯ, ಸಣ್ಣಬೋರಯ್ಯ, ಕ್ಯಾಸಯ್ಯ ಮತ್ತು ಓಬಯ್ಯ. ಅಷ್ಟು ಜನ ಮಕ್ಕಳು ಇದ್ದರು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ವಂಶವೃಕ್ಷವನ್ನು ಹಾಜರುಪಡಿಸಿದ್ದೇನೆ. ಬಂಗಾರಜ್ಜಿ ರವರು ಯಾವಾಗ ಮರಣ ಹೊಂದಿದ್ದರು ಎಂದು ನನಗೆ ಗೊತ್ತಿಲ್ಲ. ಬೋರಜ್ಜಿರವರು ಯಾವಾಗ ಮರಣ ಹೊಂದಿದ್ದರು ಎಂದು ನನಗೆ ಗೊತ್ತಿಲ್ಲ. ಬೋರಜ್ಜಿ ರವರ ತವರೂರು ಚಿಕ್ಕಉಳ್ಳಾರ್ತಿ ಗ್ರಾಮವಾಗಿರುತ್ತದೆ. ಸಾಕ್ಷಿ ಮುಂದುವರೆದು ಬಂಗಾರಜ್ಜಿ ಮತ್ತು ಬೋರಜ್ಜಿ ರವರು ಅಕ್ಕ ತಂಗಿಯರ ಮಕ್ಕಳು ಎಂದು ನುಡಿದಿರುತ್ತಾರೆ.

ಬೋರಜ್ಜಿರವರ ತಂದೆ ತಾಯಿಯ ಹೆಸರು ನನಗೆ ಗೊತ್ತಿಲ್ಲ. ಬೋರಜ್ಜಿರವರಿಗೆ ಚನ್ನಯ್ಯ ಒಬ್ಬನೆ ಮಗನಾಗಿರುತ್ತಾನೆ ಎಂದರೆ ಸರಿಯಲ್ಲ. ಸನಂ.56 ರ ವಿಸ್ತೀರ್ಣ ಎಷ್ಟು ಇದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸನಂ.56/1 – 31 ಎಕರೆ 18 ಗುಂಟೆ ಮತ್ತು ಸನಂ.56/2 – 30 ಎಕರೆ 19 ಗುಂಟೆ ಇರುತ್ತದೆ. ಅದರಲ್ಲಿ 4 ಗುಂಟೆ ಖರಾಬು ಇರುತ್ತದೆ ಎಂದು ನುಡಿದಿರುತ್ತಾರೆ. ಸನಂ.56 ರ ಪೋಡು ಸನಂ.56/1 ಮತ್ತು ಸನಂ.56/2 ಯಾವಾಗ ಆಯಿತು ಎಂದು ನನಗೆ ಗೊತ್ತಿಲ್ಲ. ಯಾವ ಕಾರಣಕ್ಕಾಗಿ ಸದರಿ ಜಮೀನು ಪೋಡು ಆಯಿತು ಎಂದು ನನಗೆ ಗೊತ್ತಿಲ್ಲ.

ಸನಂ.56/2 ರಲ್ಲಿ ದಿನಾಂಕ 28.01.1988 ರಂದು 5 ಎಕರೆ ಜಮೀನನ್ನು ಸಣ್ಣಬೋರಯ್ಯ ರವರು 23 ನೇ ಪ್ರತಿವಾದಿ ನಸೀರ್ ವುದ್ದೀನ್ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಕ್ರಯ ಪತ್ರದ ಪ್ರಕಾರ ನಸೀರ್ ವುದ್ದೀನ್ ರವರ ಹೆಸರಿನಲ್ಲಿ ಪಹಣಿ ಪತ್ರಿಕೆಗಳು ಬಂದಿವೆ ಎಂದರೆ ಸರಿ. ಕ್ರಯ ಪತ್ರದ ಪ್ರಕಾರ 23 ನೇ ಪ್ರತಿವಾದಿ ನಸೀರ್ ವುದ್ದೀನ್ ರವರು ಸದರಿ ಜಮೀನಿನ ಸ್ವಾದೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ ಸಣ್ಣಬೋರಯ್ಯ ರವರು ದಿನಾಂಕ 20.02.1989 ರಂದು 24 ನೇ ಪ್ರತಿವಾದಿ ಗೋಪಾಲ್ ರವರಿಗೆ 5 ಎಕರೆ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರದ ಪ್ರಕಾರ ಪಹಣಿ ಪತ್ರಿಕೆಗಳಲ್ಲಿ 24 ನೇ ಪ್ರತಿವಾದಿ ಗೋಪಾಲ್ ರವರ ಹೆಸರು ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ತಹಸೀಲ್ದಾರ್ ರವರ ಕಚೇರಿಯಲ್ಲಿ ಎಂ ಆರ್ ನಂ.27/1988-89 ರ ಆದೇಶದ ಪ್ರಕಾರ ಅವರ ಹೆಸರಿನಲ್ಲಿ ಕಂದಾಯ ದಾಖಲಾತಿಗಳು ಬಂದಿವೆ ಎಂದರೆ ನನಗೆ ಗೊತ್ತಿಲ್ಲ.

ಅದೇ ರೀತಿ ಸಣ್ಣಬೋರಯ್ಯ ರವರು ಸನಂ.56/2 ರಲ್ಲಿ 5 ಎಕರೆ ಜಮೀನನ್ನು ಜಿ ಎನ್ ಅಕ್ಕಮ್ಮ ರವರಿಗೆ ದಿನಾಂಕ 05.09.1988 ರಂದು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಜಿ ಎನ್ ಅಕ್ಕಮ್ಮ ರವರು ಖರೀದಿ ನಂತರ ಸದರಿ ಜಮೀನಿನ ಕಾನೂನುಬದ್ಧ ಮಾಲೀಕರಾಗಿ ಸ್ವಾದೀನದಲ್ಲಿದ್ದರು ಎಂದರೆ ನನಗೆ ಗೊತ್ತಿಲ್ಲ. ಕ್ರಯ ಪತ್ರದ ಆಧಾರದ ಮೇಲೆ ಕಂದಾಯ ದಾಖಲಾತಿಗಳು ಅವರ ಹೆಸರಿನಲ್ಲಿ ಬಂದಿದ್ದವು ಎಂದರೆ ನನಗೆ ಗೊತ್ತಿಲ್ಲ.

ಅದೇ ರೀತಿ ಸಣ್ಣಬೋರಯ್ಯ ರವರು ಸನಂ.56/2 ರಲ್ಲಿ 5 ಎಕರೆ ಜಮೀನನ್ನು ಸ್ವಾಮಿ ಲಿಂಗಪ್ಪ ರವರಿಗೆ ದಿನಾಂಕ 03.04.1989 ರಂದು ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಖರೀದಿ ನಂತರ ಸದರಿ ಜಮೀನಿನ ಕಾನೂನುಬದ್ಧ ಮಾಲೀಕರಾಗಿ ಸ್ವಾದೀನದಲ್ಲಿದ್ದರು ಎಂದರೆ ನನಗೆ ಗೊತ್ತಿಲ್ಲ. ಕ್ರಯ ಪತ್ರದ ಆಧಾರದ ಮೇಲೆ ಕಂದಾಯ ದಾಖಲಾತಿಗಳು ಅವರ ಹೆಸರಿನಲ್ಲಿ ಬಂದಿದ್ದವು ಎಂದರೆ ನನಗೆ ಗೊತ್ತಿಲ್ಲ. ಅವರ ಹೆಸರಿಗೆ ಸದರಿ ಜಮೀನು ಬಂದ ನಂತರ ಸನಂ.56/2 ಎಪಿ4 ಎಂದು ಅವರ ಹೆಸರಿಗೆ ಪಹಣಿ ಪತ್ರಿಕೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಮೇಲೆ ಹೇಳಿದ ಅಕ್ಕಮ್ಮ ಮತ್ತು ಸ್ವಾಮಿ ಲಿಂಗಪ್ಪ ರವರು 25 ನೇ ಪ್ರತಿವಾದಿರವರಿಗೆ ಅವರು ಖರೀದಿಸಿದ ಜಮೀನನ್ನು ಮಾರಾಟ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನ ಸ್ವಾಧೀನದಲ್ಲಿ ಕಾನೂನು ಬದ್ಧ ಮಾಲೀಕರಾಗಿ 25 ನೇ ಪ್ರತಿವಾದಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಸನಂ.56/2 ರ ಜಮೀನನ್ನು ನೋಡಿರುತ್ತೇನೆ. ಸದರಿ ಜಮೀನಿನಲ್ಲಿ ಒಂದು ಇಟ್ಟಿಗೆ ಫ್ಯಾಕ್ಟರಿ ಇದೆ ಎಂದರೆ ನನಗೆ ಗೊತ್ತಿಲ್ಲ.

25 ನೇ ಪ್ರತಿವಾದಿ ರಾಮು ರವರು ಸದರಿ ಜಮೀನಿನಲ್ಲಿ ಕಾರ್ಪೊರೇಶನ್ ಬ್ಯಾಂಕ್ ಚಳ್ಳಕೆರೆಯಿಂದ 50 ಲಕ್ಷ ರೂಪಾಯಿ ಸಾಲವನ್ನು ಜಮೀನು ಆಧಾರ ಮಾಡಿ ಪಡೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಇಟ್ಟಿಗೆ ಫ್ಯಾಕ್ಟರಿಗೆ ಲಕ್ಷ್ಮಿ ಬ್ರಿಕ್ಸ್ ಇಂಡಸ್ಟ್ರೀಸ್ ಎಂದು ಹೆಸರಿಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿರವರು ಅವರು ಖರೀದಿಸಿದ ಜಮೀನಿನಲ್ಲಿ ಸಾಕಷ್ಟು ಹಣ ವ್ಯಯ ಮಾಡಿ ಅಭಿವೃದ್ಧಿ ಗೊಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನನ್ನು ಹದ್ದುಬಸ್ತು ಮಾಡಿಸಿ ಅವರು ಖರೀದಿಸಿದ ಜಮೀನಿನ ಸನಂ.56/2 ಪಿ3 ಮತ್ತು 56/2 ಪಿ4 ಎಂದು ನಮೂದಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

ಸಣ್ಣಬೋರಯ್ಯ ರವರು ಸನಂ.56/2 ರಲ್ಲಿಯೇ ದಿನಾಂಕ 17.12.1987 ರಲ್ಲಿ 5 ಎಕರೆ ಜಮೀನನ್ನು ತಳವಾರ್ ದಾಸಯ್ಯನ ಮಗ ನಿಂಗಣ್ಣ ರವರಿಗೆ ಮನೆಯ ಅವಶ್ಯಕತೆಗಾಗಿ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ತದನಂತರ ಅವರ ಹೆಸರಿನಲ್ಲಿಯೇ ಜಮೀನಿನ ದಾಖಲಾತಿಗಳು ಬಂದಿವೆ ಎಂದರೆ ನನಗೆ ಗೊತ್ತಿಲ್ಲ. ನಿಂಗಣ್ಣ ರವರ ಮಕ್ಕಳು ಒಟ್ಟು ಕುಟುಂಬದ ಆಸ್ತಿಗಳನ್ನು ವಿಭಜನೆ ಮಾಡಿಕೊಂಡಾಗ ಸನಂ.56/2 ರಲ್ಲಿ 5 ಎಕರೆ ಜಮೀನು ನಿಂಗಣ್ಣ ರವರ ಮಗ ಈರಣ್ಣ ರವರ ಹೆಸರಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪಾಲುವಿಭಾಗ ಪತ್ರ ಚಳ್ಳಕೆರೆಯ ಸಬ್ ರಿಜಿಸ್ಟರ್ ರವರ ಕಚೇರಿಯಲ್ಲಿ ನೋಂದಣಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ತದನಂತರ ಈರಣ್ಣ ರವರು ತಮ್ಮ ಭಾಗಕ್ಕೆ ಬಂದ ಜಮೀನನ್ನು ಕಾನೂನುಬದ್ಧ ವಾರಸುದಾರರಾಗಿ ಅನುಬವಿಸುತ್ತಾ ಬಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ತಮ್ಮ ಭಾಗಕ್ಕೆ ಬಂದ ಜಮೀನನ್ನು ಈರಣ್ಣ ರವರು ದಿನಾಂಕ 11.07.1994 ರಲ್ಲಿ ರವೀಂದ್ರಚಾರ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ತದನಂತರ ರವೀಂದ್ರಚಾರ್ ರವರು ಸದರಿ ಜಮೀನಿನ ಕಾನೂನುಬದ್ಧ ಮಾಲೀಕರಾಗಿ ಸ್ವಾಧೀನವನ್ನು ಹೊಂದಿದ್ದರು ಮತ್ತು ಕಂದಾಯ ದಾಖಲಾತಿಗಳು ಅವರ ಹೆಸರಿನಲ್ಲಿ ಇದ್ದವು ಎಂದರೆ ನನಗೆ ಗೊತ್ತಿಲ್ಲ. ರವೀಂದ್ರಚಾರ್ ರವರು ಸದರಿ ಜಮೀನನ್ನು ದಿನಾಂಕ 13.03.2008 ರಂದು 26 ನೇ ಪ್ರತಿವಾದಿ ಭಕ್ತವತ್ಸಲ ಶೆಟ್ಟಿ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಖರೀದಿ ಪ್ರಕಾರ ಭಕ್ತವತ್ಸಲ ಶೆಟ್ಟಿ ರವರು ಸನಂ.56/2 ರ 5 ಎಕರೆ ಜಮೀನಿನಲ್ಲಿ ಕಾನೂನುಬದ್ಧ ಮಾಲೀಕರಾಗಿ ಸ್ವಾದೀನವನ್ನು ಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಕಂದಾಯ ದಾಖಲಾತಿಗಳು ಅವರ ಹೆಸರಿನಲ್ಲಿ ನಮೂದು ಆಗಿವೆ ಎಂದರೆ ನನಗೆ ಗೊತ್ತಿಲ್ಲ.

ಸಣ್ಣಬೋರಯ್ಯ ರವರು ಸನಂ.56/2 ರಲ್ಲಿ 5 ಎಕರೆ 19 ಗುಂಟೆ ಜಮೀನನ್ನು ಗಂಗಮ್ಮ ರವರಿಗೆ ದಿನಾಂಕ 23.08.1989 ರಲ್ಲಿ ಕುಟುಂಬದ ಅವಶ್ಯಕತೆಗಾಗಿ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರದ ಆಧಾರದ ಮೇಲೆ ಅವರ ಹೆಸರಿನಲ್ಲಿ ಕಂದಾಯ ದಾಖಲಾತಿಗಳು ಬಂದಿವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನನ್ನು ಗಂಗಮ್ಮ ರವರು ಸುವರ್ಣಮ್ಮ ಎನ್ನುವವರಿಗೆ ದಿನಾಂಕ 29.06.2005 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರ ನೋಂದಣಿ ಆಗಿದ್ದು ಸುವರ್ಣಮ್ಮ ರವರ ಹೆಸರಿಗೆ ಕಂದಾಯ ದಾಖಲಾತಿಗಳು ಬಂದಿವೆ ಎಂದರೆ ನನಗೆ ಗೊತ್ತಿಲ್ಲ. ಆದಾದನಂತರ ಸುವರ್ಣಮ್ಮ ರವರು ತಾವು ಖರೀದಿ ಮಾಡಿದ ಜಮೀನನ್ನು ವಾಲ್ಮೀಕಿ ಬಂಗಾರಪ್ಪ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಖರೀದಿ ನಂತರ ವಾಲ್ಮೀಕಿ ಬಂಗಾರಪ್ಪ ರವರು ಸದರಿ ಜಮೀನಿನ ಸ್ವಾದೀನವನ್ನು ಕಾನೂನುಬದ್ಧ ಮಾಲೀಕರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಆದಾದನಂತರ ವಾಲ್ಮೀಕಿ ಬಂಗಾರಪ್ಪ ರವರು ದಿನಾಂಕ 09.04.2012 ರಂದು 26 ನೇ ಪ್ರತಿವಾದಿ ಭಕ್ತವತ್ಸಲ ಶೆಟ್ಟಿ ರವರ ಹೆಸರಿನಲ್ಲಿ ಅವರು ಖರೀದಿಸಿದ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಳ್ಳಕೆರೆ